561(363) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನ್ಯಾಯ ಮಂಡಳಿಯ ತೀರ್ಪು ಯಾವಾಗ ಬರಬಹುದು?

ಆ) ಕಾವೇರಿ ನ್ಯಾಯ ಮಂಡಳಿಗಾಗಿ ಇದುವರೆವಿಗೂ ಕರ್ನಾಟಕ ರಾಜ್ಯಕ್ಕೆ ಆಗಿರುವ ವೆಚ್ಚ ಎಷ್ಟು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಕಾವೇರಿ ಜಲ ವಿವಾದ ನ್ಯಾಯಾಧೀಕರಣವು ತನ್ನ ಅಂತಿಮ ತೀರ್ಪನ್ನು ದಿನಾಂಕ 05 02 2007 ರಂದು ನೀಡಿದೆ

ಆ) ಕಾವೇರಿ ಜಲ ವಿವಾದ ನ್ಯಾಯಾಧೀಕರಣದ ಯಾವುದೇ ಆಡಳಿತಾತ್ಮಕ ವೆಚ್ಚವನ್ನು ರಾಜ್ಯ ಸರ್ಕಾರವು ಇದುವರೆವಿಗೆ ಭರಿಸಿರುವುದಿಲ್ಲ ನ್ಯಾಯಾಧೀಕರಣದ ಆಡಳಿತಾತ್ಮಕ ವೆಚ್ಚವನ್ನು ನ್ಯಾಯಾಧೀಕರಣವು ದಿನಾಂಕ 05 02 2007 ರಂದು ನೀಡಿರುವ ಅಂತಿಮ ತೀರ್ಪಿನೊಂದಿಗೆ ಸೂಚಿಸಿರುವಂತೆ ಒಟ್ಟು ಮೊತ್ತದ ಶೇಕಡ 40ರಷ್ಟನ್ನು ಕರ್ನಾಟಕವು ಭರಿಸಬೇಕಾಗುತ್ತದೆ

562 (364) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾಲಯಗಳಿವೆ, ಅವು ಯಾವುವು ಹಾಗೂ ಎಷ್ಟು ವಿಶ್ವವಿದ್ಯಾಲಯಗಳಿಗೆ ಬೇಡಿಕೆ ಇದೆ?

ಆ) ಹಂಪೆ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 11 ವಿಶ್ವವಿದ್ಯಾಲಯಗಳಿವೆ ಅವು ಈ ಕೆಳಕಂಡಂತಿವೆ,

1) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

2) ಮೈಸೂರು ವಿಶ್ವವಿದ್ಯಾಲಯ, ಮೈಸೂರು

3) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ